

# ಮಹಿಷಾಸುರ ಮರ್ದಿನಿ

■ ಗೀತಾ ಎಸ್ ಭಟ್. ಭಟ್ಕಳ

ದಸರಾ ಹಬ್ಬಕ್ಕೆಂದು ಮೊಮ್ಮಕ್ಕಳು ತಂದೆತಾಯಿಗಳೊಂದಿಗೆ ಮೈಸೂರಿನ ಅಜ್ಜಿ ಮನೆಗೆ ಬಂದಿದ್ದರು. ಅಜ್ಜಿ, ಆರೇಳು ವರ್ಷದ ನಾಲ್ಕೈದು ಮೊಮ್ಮಕ್ಕಳನ್ನು ತನ್ನ ಸುತ್ತಲೂ ಕೂರಿಸಿಕೊಂಡು 'ನವರಾತ್ರಿ ಹಬ್ಬ (ದಸರಾ) ಮುಗಿತಲ್ವಾ..? ಮೈಸೂರು ಎಂಬ ಊರಿಗೆ ಸಂಬಂಧಿಸಿದಂತೆ ಒಂದು ಕಥೆ ಹೇಳ್ತೀನಿ ಕೇಳಿ' ಎಂದಳು.

'ಯಾವ ಕಥೆ ಅಜ್ಜಿ..? ಬೇಗ ಹೇಳಿ'

ನೀವೆಲ್ಲಾ ಮಹಿಷಾಸುರ ಮರ್ಧಿನಿ ಎಂಬ ಹೆಸರು ಕೇಳಿದ್ದೀರಾ?

ಮಕ್ಕಳು ಮುಖ ಮುಖ ನೋಡಿಕೊಂಡರು.

ಹೌದು ಅದು ತಾಯಿ ದುರ್ಗಮ್ಮನ ಹೆಸರು. ಮಹಾದೇವಿಗೆ ಯಾಕೆ ಆ ಹೆಸರು ಬಂತೆಂದು ಹೇಳ್ತೀನಿ ಕೇಳಿ